



ಡಾ. ಎಸ್. ರಾಮಮೂರ್ತಿ

# 11-12-2014ರಿಂದ 17-12-2014ರವರೆಗೆ



ಮೇಷ

ವಾರದ ಆರಂಭದಲ್ಲಿ ಭಯ. ಸ್ಥಿರ ನಿರ್ಧಾರ ತೆಗೆದುಕೊಳ್ಳಲಾಗುವುದಿಲ್ಲ. ಪ್ರಯಾಣದಲ್ಲಿ ಒತ್ತಡ. ಬಂಧುಗಳ ಮೇಲೆ ಕೋಪ. ವೃತ್ತಿ ವ್ಯವಹಾರಗಳಲ್ಲಿ ಅಸಮಾಧಾನ. ವಾರದ ಮಧ್ಯಭಾಗದಿಂದ ಅನುಕೂಲ. ಆತ್ಮಬಲ ಹೆಚ್ಚುವುದು. ಕೆಲಸ ಕಾರ್ಯಗಳಲ್ಲಿ ಪ್ರಗತಿ. ವ್ಯಾಪಾರದಲ್ಲಿ ಲಾಭ.ಸಾಧು ಸಂತರ ಭೇಟಿ. ಆಪ್ತರಿಂದ ಸಹಕಾರ, ಸಲಹೆ. ಶುಭದಿನ: 15; ಶಿವ, ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ



ವೃಷಭ

ವಾರದ ಆರಂಭದಲ್ಲಿ ಸೌಖ್ಯ. ಒತ್ತಡವಿಲ್ಲದೆ ಕಾರ್ಯ ಸಾಧನೆ. ಉದ್ಯೋಗದಲ್ಲಿ ಮುನ್ನಡೆ. ವಾರದ ಮಧ್ಯಭಾಗದಲ್ಲಿ ಆತಂಕ. ಅನಾವಶ್ಯಕ ಖರೀದಿ. ಸಣ್ಣಪುಟ್ಟ ಪೆಟ್ಟಾಗುವಿಕೆ. ಕಾರ್ಯಹಿನ್ನಡೆ. ಕೋಪತಾಪದ ಮಾತನ್ನಾಡುವಿಕೆ. ವ್ಯಾಪಾರದಲ್ಲಿ ಹಾನಿ. ಕುಟುಂಬದಲ್ಲಿ ಅಶಾಂತಿ. ವಾರಾಂತ್ಯದಲ್ಲಿ ಮನಃಶಾಂತಿ, ಪ್ರಗತಿ. ಶುಭದಿನ: 12; ದತ್ತಾತ್ರೇಯ, ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ



ಮಿಥುನ

ವಾರದ ಮಧ್ಯಭಾಗದವರೆಗೂ ಸಮಾಧಾನ. ಸಮಯಕ್ಕೆ ಸರಿಯಾಗಿ ಕೆಲಸಗಳು ಮುಗಿಯುವುದು. ವ್ಯಾಪಾರದಲ್ಲಿ ಸೂಕ್ತ ಲಾಭ. ಆಪ್ತರ ಆಗಮನ. ತಂಟೆ ತಕರಾರುಗಳಲ್ಲಿ ಜಯ. ಶತ್ರುಭೀತಿ ದೂರವಾಗುವುದು. ವಾರಾಂತ್ಯದಲ್ಲಿ ಸೋಮಾರಿತನ. ಅಹಿತಕರ ಭೋಜನ. ಅಧಿಕಾರಿಗಳ ಮೇಲೆ ಸಿಟ್ಟು. ವೃತ್ತಿ ವ್ಯವಹಾರದಲ್ಲಿ ಹಿನ್ನಡೆ. ಶುಭದಿನ: 14; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ




ಕಟಕ

ಕಾರ್ಯಗಳು ಸರಾಗವಾಗಿ ನಡೆಯುವುವು. ವ್ಯಾಪಾರದಲ್ಲಿ ಲಾಭ. ಹೋರಾಟಗಳಲ್ಲಿ ಜಯ. ದೇವತಾ ಕ್ಷೇತ್ರದರ್ಶನ. ಹಿರಿಯರೊಂದಿಗಿನ ಮನಸ್ತಾಪ ದೂರವಾಗುವುದು. ಸಂದೇಹ ಬಗೆಹರಿಯುವುದು. ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು. ಪ್ರಾಮಾಣಿಕತೆಗಾಗಿ ಹಿರಿಯರಿಂದ ಪ್ರಶಂಸೆ. ಗೌರವ ಪ್ರಾಪ್ತಿ. ಶುಭದಿನ: 15; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ



ಸಿಂಹ

ವಾರದ ಆರಂಭದಲ್ಲಿ ಬೇಸರ. ಕೆಲಸದಲ್ಲಿ ಹಿನ್ನಡೆ. ಅನಾವಶ್ಯಕ ತಿರುಗಾಟ. ವ್ಯಾಪಾರದಲ್ಲಿ ಹಾನಿ. ಆರೋಗ್ಯ ವ್ಯತ್ಯಯ. ಅಹಿತ ಸುದ್ದಿ. ವಾರದ ಮಧ್ಯಭಾಗದಿಂದ ಸಮಾಧಾನ. ದಿಟ್ಟ ನಿರ್ಧಾರ, ಕುಟುಂಬ ಸದಸ್ಯರಲ್ಲಿ ಒಮ್ಮತ. ಉದ್ಯೋಗ ವೃತ್ತಿಗಳಲ್ಲಿ ಸಫಲತೆ. ಕ್ರಯ ವಿಕ್ರಯ ಒಪ್ಪಂದ ವ್ಯವಹಾರಗಳಲ್ಲಿ ಲಾಭ. ಪ್ರಯಾಣ ಸೌಖ್ಯ. ಶುಭದಿನ: 15; ಗಣಪತಿ, ದತ್ತಾತ್ರೇಯ ಅಷ್ಟೋತ್ತರ ಪಠಿಸಿ



ಕನ್ಯಾ

ವಾರದ ಆರಂಭದಲ್ಲಿ ಮನಃಶಾಂತಿ. ಯೋಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವಿಕೆ. ತಾಳ್ಮೆಯ ಮಾತುಗಳು. ವೃತ್ತಿ ಪ್ರವೃತ್ತಿಗಳಲ್ಲಿ ಲಾಭ. ಹಿತಕರ ಘಟನೆ. ವಿಪರೀತ ಶ್ರಮ. ಅನಾವಶ್ಯಕ ಖರ್ಚು. ಕಾರ್ಯ ವೈಫಲ್ಯ. ಸಂದೇಶಗಳ ವಿಳಂಬ. ನೆರೆಯವರಿಂದ ಸಮಸ್ಯೆ. ವ್ಯಾಪಾರದಲ್ಲಿ ಹಾನಿ. ವಾರಾಂತ್ಯದಲ್ಲಿ ಪರಿಸ್ಥಿತಿ ಸುಧಾರಣೆ. ಶುಭದಿನ: 12; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ




ತುಲಾ

ವಾರದ ಮಧ್ಯಭಾಗದವರೆಗೂ ಅನುಕೂಲ. ನಿರೀಕ್ಷಿತ ಫಲ. ವ್ಯಾಪಾರದಲ್ಲಿ ತಕ್ಕ ಲಾಭ. ಪ್ರೀತಿ ಪಾತ್ರರೊಂದಿಗೆ ಸಮಾಲೋಚನೆ. ಗಣ್ಯರಿಂದ ಸಲಹೆ ಹಾಗೂ ಮಾರ್ಗದರ್ಶನ. ಶ್ರಮ ಕಡಿಮೆಯಾಗುವುದು. ಪ್ರಯಾಣ ಸೌಖ್ಯ. ವಾರಾಂತ್ಯದಲ್ಲಿ ಸೋಮಾರಿತನ. ಅಧ್ಯಯನದಲ್ಲಿ ನಿರಾಸಕ್ತಿ. ಅನಾರೋಗ್ಯ. ವೃತ್ತಿ ಹಿನ್ನಡೆ. ಶುಭದಿನ: 14; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ



ವೃಶ್ಚಿಕ

ವಾರದ ಮಧ್ಯಭಾಗದವರೆಗೂ ಸಮಾಧಾನ. ಆಸೆ ಆಕಾಂಕ್ಷೆಗಳು ಈಡೇರುವುವು. ಉದ್ಯೋಗದಲ್ಲಿ ಸಫಲತೆ. ವ್ಯಾಪಾರದಲ್ಲಿ ಲಾಭ ವೃದ್ಧಿ. ಕುಟುಂಬ ಸದಸ್ಯರಲ್ಲಿ ಏಕಾಭಿಪ್ರಾಯ. ಹಿರಿಯರ ಮೇಲೆ ವಿಶ್ವಾಸ ಹೆಚ್ಚುವುದು. ಸಂದೇಶಗಳಿಂದ ಆತ್ಮಬಲ ವೃದ್ಧಿ. ವಾರಾಂತ್ಯದಲ್ಲಿ ಚಂಚಲತೆ. ಅಕಾಲ ಭೋಜನ. ವ್ಯವಹಾರದಲ್ಲಿ ನಷ್ಟ. ಶುಭದಿನ: 14; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ



ಧನಸ್ಸು

ವಾರದ ಆರಂಭದಲ್ಲಿ ಏನಾದರೊಂದು ಸಮಸ್ಯೆ. ಆಟ ಪಾಠಗಳಲ್ಲಿ ಹಿನ್ನಡೆ. ಅನಾರೋಗ್ಯ, ಉದ್ಯೋಗದಲ್ಲಿ ತಪ್ಪಾಗುವಿಕೆ. ಲೇವಾದೇವಿಗಳಲ್ಲಿ ಹಾನಿ. ಮಕ್ಕಳ ವಿಚಾರದಲ್ಲಿ ಬೇಸರ. ವಾರದ ಮಧ್ಯಭಾಗದಿಂದ ಚೇತರಿಕೆ. ಗಣ್ಯರ ಭೇಟಿ. ವ್ಯಾಪಾರ ವೃತ್ತಿಗಳಲ್ಲಿ ಲಾಭ. ಪ್ರಯಾಣ ಸೌಖ್ಯ. ಗೃಹ ನವೀಕರಣ ಚಿಂತನೆ. ಶುಭದಿನ: 16; ಗಣಪತಿ, ಗುರು ಅಷ್ಟೋತ್ತರ ಪಠಿಸಿ



ಮಕರ

ವಾರದ ಆರಂಭದಲ್ಲಿ ಸುಸೂತ್ರವಾಗಿ ಕೆಲಸಗಳು ನೆರವೇರುವುವು. ಕ್ರಯ ವಿಕ್ರಯ ಒಪ್ಪಂದ ವ್ಯವಹಾರಗಳಲ್ಲಿ ಲಾಭ. ಹಿತಕರ ಸುದ್ದಿ. ವಾಹನ ಸೌಖ್ಯ. ವಿರೋಧಿಗಳಿಗೆ ಹಿನ್ನಡೆ. ವಾರದ ಮಧ್ಯಭಾಗದಲ್ಲಿ ಒತ್ತಡ. ಅನಾವಶ್ಯಕ ಖರೀದಿ. ಮಿತ್ರರು ಹೇಳಿದಂತೆ ನಡೆಯುವುದಿಲ್ಲ, ಅನಾರೋಗ್ಯ. ವಾರಾಂತ್ಯದಲ್ಲಿ ಸಮಾಧಾನ ಪ್ರಾಪ್ತಿ. ಶುಭದಿನ: 12; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ



ಕುಂಭ

ವಾರದ ಮಧ್ಯಭಾಗದವರೆಗೂ ಮನಃಶಾಂತಿ. ಉದ್ಯೋಗದಲ್ಲಿ ನಿರಾತಂಕ. ಹಿರಿಯರಿಂದ ಹೊಗಳಿಕೆ. ವ್ಯಾಪಾರದಲ್ಲಿ ಲಾಭ. ಆಪ್ತರ ಭೇಟಿ. ವಿದೇಶಿ ವ್ಯವಹಾರ ಯೋಜನೆ. ಕಲೆ ಕ್ರೀಡೆಗಳಲ್ಲಿ ಆಸಕ್ತಿ. ಪ್ರಯಾಣ ಸೌಖ್ಯ. ವಾರಾಂತ್ಯದಲ್ಲಿ ದುಡುಕಿನ ಮಾತುಗಳು. ಆರೋಗ್ಯ ವ್ಯತ್ಯಯ. ಕಾರ್ಯ ವಿಘ್ನ ಲೇವಾದೇವಿಗಳಲ್ಲಿ ಹಾನಿ. ಶುಭದಿನ: 14; ಗಣಪತಿ, ಗುರು ಅಷ್ಟೋತ್ತರ ಪಠಿಸಿ



ಮೀನ

ವಾರದ ಮಧ್ಯಭಾಗದವರೆಗೂ ಮನಃಶಾಂತಿ. ಸಮಯೋಚಿತ ಮಾತುಗಳು. ಶ್ರಮವಿಲ್ಲದೆ ಕಾರ್ಯ ಸಿದ್ಧಿ. ಹಿತೈಷಿಗಳಿಂದ ಸಹಾಯ. ವ್ಯಾಪಾರದಲ್ಲಿ ಲಾಭ. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ದೈವೀಕ, ಕಾರ್ಯ ಯೋಜನೆ. ವಾರಾಂತ್ಯದಲ್ಲಿ ನಿದ್ರಾಹೀನತೆ. ಉದ್ಯೋಗದಲ್ಲಿ ಒತ್ತಡ. ಲೇವಾದೇವಿಗಳಲ್ಲಿ ಹಿನ್ನಡೆ. ಶುಭದಿನ: 14; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ